
# ಪರಿಪೂರ್ಣ ವ್ಯಕ್ತಿಯಾಗಿ ಶ್ರೀರಾಮಕೃಷ್ಣರು

ಸ್ವಾಮಿ ನಿತ್ಯಸ್ಥಾನಂದ



ಧರ್ಮದ ಪರಿಪೂರ್ಣ ರೂಪ

**ಧ**ರ್ಮಕ್ಕೆ ಮುಖ್ಯವಾದ ಮೂರು ಮುಖಗಳಿವೆ: **ನೈತಿಕತೆ, ಮಾನವೀಯತೆ ಮತ್ತು ಆಧ್ಯಾತ್ಮಿಕತೆ.** ಧರ್ಮವನ್ನು ಒಂದು ವೃಕ್ಷಕ್ಕೆ ಹೋಲಿಸಿದರೆ ಆಧ್ಯಾತ್ಮಿಕತೆ ಅದರ ಬೇರು, ನೈತಿಕತೆ ಮಾನವೀಯತೆ ಅದರ ಕಾಂಡ ಮತ್ತು ಫಲಪುಷ್ಪಾದಿಗಳು. ವಿವಿಧ ಧಾರ್ಮಿಕ ಆಚರಣೆಗಳೆಲ್ಲ ಮರಕ್ಕೆ ಹಬ್ಬಿಕೊಳ್ಳುವ ಬಳ್ಳಿ ಮುಂತಾದವುಗಳು. ಬೇರು ನೆಲದ ಒಳಗೆ ಇರುವುದರಿಂದ ಅನೇಕರು ಅದನ್ನು ಗಮನಿಸುವುದಿಲ್ಲ, ಕಡೆಗಣಿಸುತ್ತಾರೆ. ಅದಕ್ಕೆ ನೀರೆರೆಯುವುದಿಲ್ಲ. ಇದರಿಂದ ಮರ ದುರ್ಬಲವಾಗುತ್ತದೆ. ಅದಕ್ಕೆ ಸಾಕಷ್ಟು ಫಲಪುಷ್ಪಗಳನ್ನು ನೀಡಲಾಗುವುದಿಲ್ಲ. ಮರವನ್ನು ಬಳ್ಳಿಯೇ ಆವರಿಸಿಕೊಳ್ಳುತ್ತದೆ ಅಂದರೆ ಆಧ್ಯಾತ್ಮಿಕ ತಳಹದಿ ಗಟ್ಟಿಯಾಗಿಲ್ಲದಿದ್ದರೆ ನೈತಿಕತೆ ದುರ್ಬಲವಾಗಿ ಕುಸಿಯುತ್ತದೆ

ಆಂತರಿಕ ದಿವ್ಯತೆಯು ಸಮಗ್ರವಾಗಿ ಬಾಹ್ಯ ಅಭಿವ್ಯಕ್ತಿಯ ಮೂಲಕ ಪ್ರತಿಫಲಿಸಿದಾಗ ಪರಿಪೂರ್ಣ ವ್ಯಕ್ತಿತ್ವವು ಹೊರಹೊಮ್ಮುತ್ತದೆ. ಶ್ರೀರಾಮಕೃಷ್ಣರ ವಿಷಯದಲ್ಲಂತೂ ಇದು ಸತ್ಯಸ್ಯ ಸತ್ಯ. ಧರ್ಮದ ಮೂರು ಮುಖಗಳಲ್ಲಿ ಅವರ ಪರಿಪೂರ್ಣ ವ್ಯಕ್ತಿತ್ವದ ವಿಶ್ಲೇಷಣೆಯನ್ನು ಮನೋಜ್ಞವಾಗಿ ಮಾಡಿರುವ ಪೂಜ್ಯ ಸ್ವಾಮೀಜಿಯವರು ಈ ಪತ್ರಿಕೆಯ ಪ್ರಥಮ ಸಂಪಾದಕರು; ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು; ಗಂಭೀರ ಚಿಂತಕರು ಮತ್ತು ಲೇಖಕರು.

ಮತ್ತು ಮಾನವೀಯ ಗುಣಗಳೆಲ್ಲ ಕಣ್ಮರೆಯಾಗುತ್ತವೆ. ಯಾಗ ಯಜ್ಞಾದಿ ಕ್ರಿಯಾವಿಧಿಗಳು, ಮೂಢನಂಬಿಕೆಗಳು, ಗುಡಿಮಸೀದಿ ಚರ್ಚುಗಳು, ಧಾರ್ಮಿಕ ಹಬ್ಬ ಉತ್ಸವಗಳು, ಕೋಮುಗಲಭೆಗಳು– ಇವೇ ಮುಂತಾದವುಗಳು ಧರ್ಮದ ಹೆಸರಿನಲ್ಲಿ ವಿಜೃಂಭಿಸುತ್ತವೆ.

ಶ್ರೀರಾಮಕೃಷ್ಣರು ಧರ್ಮದ ಒಂದು ಪರಿಪೂರ್ಣ ರೂಪ. ಅವರಲ್ಲಿ ಧರ್ಮದ ಎಲ್ಲ ಅಂಶಗಳೂ ಎದ್ದು ಕಾಣುತ್ತವೆ. ಅಧ್ಯಾತ್ಮವೇ ಅವರ ಜೀವನದ ಸಾರಸರ್ವಸ್ವ. ಅದರ ಪೂರ್ಣ ಅಭಿವ್ಯಕ್ತಿಯನ್ನು ನಾವು ಅವರಲ್ಲಿ ಕಾಣುತ್ತೇವೆ. ಗಾಜಿನ ಪೆಟ್ಟಿಗೆಯೊಳಗೆ ಬೆಳಗುವ ದೀಪವಿದ್ದಂತೆ ಅವರು. ಕಾದ ಕಬ್ಬಿಣದ ಚೆಂಡು ಇದ್ದಂತೆ ಅವರು. ಒಳಗೆಲ್ಲ ಹತ್ತಿಯಿಂದ ತುಂಬಿರುವ ದಿಂಬು ಇದ್ದಂತೆ ಅವರು. ಸ್ವಲ್ಪ ಗಾಳಿ ಬೀಸಿದರೂ ಧ್ವನಿಗೈಯುವ ಸೂಕ್ಷ್ಮ ಘಂಟೆ ಇದ್ದಂತೆ ಅವರು. ಒಳಗೆಲ್ಲ ರಸಮಯವಾದ ಜಿಲೇಬಿ ಇದ್ದಂತೆ ಅವರು. ಅವರು ಸುವಾಸನೆಯೇ ಪ್ರಧಾನವಾದ ಮೈಸೂರು ಮಲ್ಲಿಗೆಯಂತೆ. ಅದಕ್ಕಾಗಿಯೇ ಶ್ರೀರಾಮಕೃಷ್ಣರ ಸಂದೇಶದ ಕುರಿತಾಗಿ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: “ಸಿದ್ಧಾಂತಗಳನ್ನು ಲೆಕ್ಕಿಸಬೇಡಿ. ಮೂಢನಂಬಿಕೆಗಳನ್ನು ಲೆಕ್ಕಿಸಬೇಡಿ. ಪ್ರತಿಯೊಬ್ಬ ಮಾನವನ ಜೀವನದ ಸಾರವಾದ ಅಧ್ಯಾತ್ಮದೊಂದಿಗೆ ಇವನ್ನು ಹೋಲಿಸಿದರೆ ಇವಕ್ಕೆ ಬೆಲೆಯಿಲ್ಲ. ಮನುಷ್ಯನಲ್ಲಿ ಇದು ಹೆಚ್ಚು ವಿಷದವಾಗಿ ತೋರಿದಷ್ಟೂ ಸತ್ಕಾರ್ಯ ಸಾಧನೆಗೆ ಅವನು ಮಹಾಶಕ್ತಿಯಾಗುತ್ತಾನೆ. ಮೊದಲು ಅದನ್ನು ಸಂಪಾದಿಸಿ, ಸಾಧಿಸಿ; ಯಾರನ್ನೂ ದೂರಬೇಡಿ.”

ಅಧ್ಯಾತ್ಮದ ಪರಿಪೂರ್ಣ ಪ್ರಕಾಶ

ಶ್ರೀರಾಮಕೃಷ್ಣರು ಆಧ್ಯಾತ್ಮಿಕವಾಗಿ ಪರಿಪೂರ್ಣ ವ್ಯಕ್ತಿಯಾಗಿದ್ದುದು ಮಾತ್ರವಲ್ಲದೆ, ಅಧ್ಯಾತ್ಮದ ಪರಿಪೂರ್ಣ ಪ್ರಕಾಶವನ್ನು ನಾವು ಅವರಲ್ಲಿ ಕಾಣುತ್ತೇವೆ. ಪರಿಪೂರ್ಣತೆ ಎಂದರೇನು? ಒಂದು ಯಂತ್ರದ ಎಲ್ಲ ಭಾಗಗಳೂ ಸರಿಯಾಗಿ ಕೆಲಸಮಾಡುತ್ತಿದ್ದು ಇಡೀ ಯಂತ್ರವು ಒಂದು ಸುಸ್ಥಿತಿಯಲ್ಲಿದ್ದರೆ ಅದು ಪರಿಪೂರ್ಣವಾಗಿದೆ (Perfect) ಎಂದು ಹೇಳುತ್ತೇವೆ. ಹಾಗೆಯೇ ದೇಹದ ಎಲ್ಲ ಅಂಗಾಂಗಗಳೂ ಸರಿಯಾಗಿದ್ದು ಅವುಗಳೆಲ್ಲ ಹೊಂದಾಣಿಕೆಯಿಂದ ಕೆಲಸ ಮಾಡುತ್ತಿದ್ದರೆ ದೇಹ ಪರಿಪೂರ್ಣ – ಅಂದರೆ ಆರೋಗ್ಯವಂತವಾಗಿದೆ ಎಂದುಕೊಳ್ಳಬಹುದು. ಇದು ದೈಹಿಕ ಪರಿಪೂರ್ಣತೆ. ಹಾಗೆಯೇ ಮನಸ್ಸಿನಲ್ಲಿಯೂ ಗೊಂದಲಗಳು, ಸಂಘರ್ಷಗಳು, ದುರ್ಭಾವನೆಗಳು ಇತ್ಯಾದಿ ಇಲ್ಲದೆ ಅದು ಸುಖಶಾಂತಿಗಳಿಂದ ಕೂಡಿದ್ದರೆ ಅದು ಪರಿಪೂರ್ಣವಾಗಿದೆ ಎನ್ನಬಹುದು. ಇದು ಮಾನಸಿಕ

ಪರಿಪೂರ್ಣತೆ. ಆತ್ಮನ ಸ್ವರೂಪವೇ ಪರಿಪೂರ್ಣತೆ. ಈ ಪರಿಪೂರ್ಣತೆಯನ್ನು ಅನುಭವಿಸುವುದು ಮತ್ತು ಈ ಪರಿಪೂರ್ಣತೆಯನ್ನು ದೇಹಮನಸ್ಸುಗಳ ಮೂಲಕ ವ್ಯಕ್ತಗೊಳಿಸುವುದು – ಇದೇ ಆಧ್ಯಾತ್ಮಿಕ ಪರಿಪೂರ್ಣತೆ. ಶ್ರೀರಾಮಕೃಷ್ಣರು ಅಧ್ಯಾತ್ಮದ ಪೂರ್ಣ ಅನುಭವವನ್ನು ಪಡೆದಿದ್ದರು – ಅಂದರೆ ಅವರು ಅದರ ಎಲ್ಲ ಮುಖಗಳನ್ನೂ ಅನುಭವಿಸಿದ್ದರು ಹಾಗೂ ಅದರ ಎಲ್ಲ ಭಾವಗಳ ಸುರಸಂಗಮವಾಗಿದ್ದರು.

ಅಧ್ಯಾತ್ಮದ ಎರಡು ಮುಖ್ಯ ಅಂಶಗಳು ಯಾವುವೆಂದರೆ **ವಿಷಯ ವಿರಾಗ ಮತ್ತು ಭಗವದನುರಾಗ.** ಶ್ರೀರಾಮಕೃಷ್ಣರಂತೂ ವೈರಾಗ್ಯದ ಪ್ರತಿಮೂರ್ತಿಯಾಗಿದ್ದರು. ವೈರಾಗ್ಯವೆಂದರೆ ವಿಷಯ ವಸ್ತುವನ್ನು ತ್ಯಾಗಮಾಡುವುದಷ್ಟೇ ಅಲ್ಲ. ಆ ಆದರ್ಶವನ್ನು ಇಡೀ ವ್ಯಕ್ತಿತ್ವ ಸ್ವೀಕರಿಸಬೇಕು, ವ್ಯಕ್ತಿತ್ವದ ಕಣಕಣವೂ ಅದರಿಂದ ಸ್ಪಂದಿಸುವಂತಾಗಬೇಕು, ವಿಷಯಸ್ಪರ್ಶವನ್ನೇ ಅದು ಸಹಿಸದಂತಾಗಬೇಕು. ಅನೇಕರು ಇಂದ್ರಿಯ ವಿಷಯಗಳನ್ನು ತ್ಯಾಗಮಾಡಿದ್ದರೂ ತಮ್ಮದೇ ಮತ, ಅಭಿಪ್ರಾಯ, ಇಚ್ಛೆಗಳಿಗೆ ಅಂಟಿಕೊಂಡಿರುತ್ತಾರೆ. ತಮ್ಮ ಅಭಿಪ್ರಾಯವೇ ಸರಿ, ಎಲ್ಲ ತಮ್ಮ ಇಚ್ಛೆಯಂತೆಯೇ ಆಗಬೇಕು ಎಂದು ಆಗ್ರಹಿಸುತ್ತಾರೆ. ಇದು ಅಹಂಕಾರದ ಪರಿಣಾಮ. ಎಲ್ಲವನ್ನೂ ತ್ಯಾಗ ಮಾಡಿಯೂ ಅಹಂಕಾರವನ್ನು ತ್ಯಾಗಮಾಡದಿದ್ದರೆ, ಅದು ರಾಜಸಿಕ ತ್ಯಾಗವಾಗುತ್ತದೆ ಮತ್ತು ಈ ರಾಜಸಿಕ ತ್ಯಾಗದಿಂದ ಯಾವುದೇ ಪ್ರತಿಫಲವೂ ಇಲ್ಲ ಎಂದು ಶ್ರೀಕೃಷ್ಣ ಅಭಿಪ್ರಾಯಪಡುತ್ತಾನೆ (**ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್**). ಶ್ರೀರಾಮಕೃಷ್ಣರು ಅಹಂಕಾರ ಶೂನ್ಯರಾಗಿದ್ದುದರಿಂದ ಯಾವ ಮತ ಅಥವಾ ಅಭಿಪ್ರಾಯಗಳಿಗೂ ಅಂಟಿಕೊಂಡಿರಲಿಲ್ಲ. ಸ್ವಂತ ಇಚ್ಛೆ ಎಂಬುದು ಅವರಲ್ಲಿ ಇರಲೇ ಇಲ್ಲ. ಭಗವದಿಚ್ಛೆಯೊಡನೆ ಅದು ಒಂದಾಗಿ ಬಿಟ್ಟಿತ್ತು.

ಪರಿಪೂರ್ಣ ವೈರಾಗ್ಯದಿಂದ ಅವರು ತುಂಬಿ ತುಳುಕುತ್ತಿದ್ದುದರಿಂದ ಸ್ವಾಭಾವಿಕವಾಗಿಯೇ ಭಗವದನುರಾಗ ಅವರಲ್ಲಿ ಪೂರ್ಣ ಪ್ರಮಾಣದಲ್ಲಿ ಅಭಿವ್ಯಕ್ತವಾಯಿತು. ಶಕ್ತಿಯುತ ಅಯಸ್ಕಾಂತವು ಕಬ್ಬಿಣದ ಅದಿರನ್ನು ರಭಸದಿಂದ ಸೆಳೆಯುವಂತೆ, ಶ್ರೀರಾಮಕೃಷ್ಣರು ಭಗವಂತನಿಂದ ಸೆಳೆಯಲ್ಪಟ್ಟರು. ಹೋಮ ಪಕ್ಷಿಯಂತೆ ಭೂಸ್ಪರ್ಶ ಮಾಡದೆಯೇ ಮೇಲಕ್ಕೆ ಹಾರಿಬಿಟ್ಟರು. ಮಗು ತಾಯಿಗಾಗಿ ವ್ಯಾಕುಲಪಡುವಂತೆ ದೇವರಿಗಾಗಿ ವ್ಯಾಕುಲಿಸಿದರು. ಮುಳುಗುತ್ತಿರುವ ವ್ಯಕ್ತಿಯು ಉಸಿರಿಗಾಗಿ ಚಡಪಡಿಸುವಂತೆ ಅವರು ದೇವರಿಗಾಗಿ ಹಂಬಲಿಸಿದರು. ಇಂತಹ ತೀವ್ರ ಅಧ್ಯಾತ್ಮಪಿಪಾಸೆಯೊಂದಿಗೆ ಸಾಧನೆಯನ್ನು ಮಾಡುತ್ತ ಭಗವಂತನೆಡೆಗೆ ಮೆಲ್ಲಗೆ ಹೋಗಲಿಲ್ಲ, ರಾಕೆಟ್ ವೇಗದಲ್ಲಿ ಧಾವಿಸಿದರು. ಭಗವದನುರಾಗ ಅವರಲ್ಲಿ ಎಷ್ಟು ತೀವ್ರವಾಗಿತ್ತೆಂದರೆ ಆ ಸತ್ಯವನ್ನು ಹಲವು ರೀತಿಯಲ್ಲಿ ಅವರು ಅನುಭವಿಸಿದರು. ಅತ್ಯಂತ ಮಹತ್ವಾಕಾಂಕ್ಷಿಯಾದ ಪರ್ವತಾರೋಹಿಯು ಎವರೆಸ್ಟ್ ಶಿಖರವನ್ನು ಒಂದೇ ಮಾರ್ಗದ ಮೂಲಕ ಹತ್ತಿ ತೃಪ್ತನಾಗದೆ ಹಲವು ಮಾರ್ಗಗಳ ಮೂಲಕ ಹತ್ತಿ ತುದಿ ಮುಟ್ಟುವಂತೆ, ಶ್ರೀರಾಮಕೃಷ್ಣರೂ ಹಲವು ಮಾರ್ಗಗಳ ಮೂಲಕ ಆ ಭಗವತ್ತತ್ತ್ವವನ್ನು ಅನುಭವಿಸಿ ಆನಂದಿಸಿದರು. ಆ ಅಮೃತಸಾಗರದಲ್ಲಿ ಅವರು ಒಮ್ಮೊಮ್ಮೆ ತೇಲುತ್ತಿದ್ದರು, ಒಮ್ಮೊಮ್ಮೆ ಈಜುತ್ತಿದ್ದರು, ಒಮ್ಮೊಮ್ಮೆ ಆಳಾತಿಆಳಕ್ಕೆ ಮುಳುಗುತ್ತಿದ್ದರು, ಒಮ್ಮೊಮ್ಮೆ ಆ ನೀರನ್ನು ಕುಡಿದು ಉನ್ಮತ್ತರಾಗುತ್ತಿದ್ದರು, ಒಮ್ಮೊಮ್ಮೆ ದಡದ ಸಮೀಪಕ್ಕೆ ಒಂದು ಅಲ್ಲಿರುವ ಜನರ ಮೇಲೆ ಆ ನೀರನ್ನು ಎರಚುತ್ತಿದ್ದರು.

> **ಅತ್ಯದ್ಭುತವಾದದ್ದು ಯಾವಾಗಲೂ ಸತ್ಯವಾದದ್ದು ಮತ್ತು ಅನುಭವಕ್ಕೆ ಬರುವಂತಹದ್ದು. ಶ್ರೀರಾಮಕೃಷ್ಣರು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಮಾತ್ರವಲ್ಲ, ಆಧ್ಯಾತ್ಮಿಕ ಸಾಧಕರಾಗಿ ನಾನಾ ರೀತಿಯ ಸಾಧನೆಗಳನ್ನು ಮಾಡುವಾಗ ಹಾಗೂ ನಂತರ ತಮ್ಮ ಮಾರ್ಗದರ್ಶನಕ್ಕಾಗಿ ಬಂದ ಭಕ್ತರಿಗೆ ಉಪದೇಶ ನೀಡುವಾಗ ಕೂಡ, ಅದ್ವಿತೀಯ ಅತ್ಯದ್ಭುತ ಆಧ್ಯಾತ್ಮಿಕ ಶಕ್ತಿ ಸಂಚಾಲಕರಾಗಿದ್ದರು.**
> –ಕ್ರಿಸ್ಟೋಫರ್ ಇಷರ್‌ವುಡ್

### ಅಧ್ಯಾತ್ಮದ ಅತ್ಯಾಕರ್ಷಕ ವರ್ಣವೈವಿಧ್ಯ

ಹೀಗೆ ಶ್ರೀರಾಮಕೃಷ್ಣರು ಅಧ್ಯಾತ್ಮದಿಂದ ತುಂಬಿ ತುಳುಕುತ್ತಿದ್ದರು. ಅಧ್ಯಾತ್ಮ ಗಾನದ ಹಲವು ರಾಗರಾಗಿಣಿಗಳನ್ನು ಅವರು ಹೊರಹೊಮ್ಮಿಸಿದರು. ಒಂದೇ ರಾಗವನ್ನು ಹಾಡುವುದು ಅವರಿಗೆ ಇಷ್ಟವಿರಲಿಲ್ಲ. ಅಧ್ಯಾತ್ಮದ ವಿವಿಧ ಭಾವಪುಷ್ಪಗಳಿಂದ ಅವರು ಅಲಂಕೃತರಾಗಿದ್ದರು. ಅವರು ಕಪ್ಪು-ಬಿಳುಪು ಚಿತ್ರದಂತೆ ಇರಲಿಲ್ಲ, ಅತ್ಯಾಕರ್ಷಕ ವರ್ಣವೈವಿಧ್ಯದಿಂದ ಕೂಡಿದ ಚಿತ್ರದಂತೆ ಇದ್ದರು.

ಅವರದೇ ಉದಾಹರಣೆಯ ಪ್ರಕಾರ, ಅವರು ಒಂದು ಬಣ್ಣದ ಬಕೆಟ್ ಇದ್ದ ಹಾಗೆ. ಅವರವರ ಬಟ್ಟೆಗೆ ಅವರವರಿಗೆ ಇಷ್ಟವಾದ ಬಣ್ಣವನ್ನು, ಒಂದೇ ಬಕೆಟ್‌ನಲ್ಲಿ ಅದ್ದಿ ಹಾಕಿಕೊಡುತ್ತಿದ್ದರು. ಸೂರ್ಯನ ಬೆಳಕನ್ನು ವಿಭಜಿಸುವ ಪ್ರಿಸಮ್ ಇದ್ದ ಹಾಗೆ ಶ್ರೀರಾಮಕೃಷ್ಣರು. ಅವರ ಮೂಲಕ ಹರಿದುಬರುವ ಭಗವದ್ ಬೆಳಕು ಹಲವು ವರ್ಣಗಳಾಗಿ ಕಾಣಿಸಿಕೊಂಡಿತು. ಕೆಲವೊಮ್ಮೆ ಅಲ್ಟ್ರಾವೈಲೆಟ್ ಅಥವಾ ಇನ್‌ಫ್ರಾರೆಡ್ ಕಿರಣಗಳಂತೆ ಅವರ ಭಗವತ್ ಕಿರಣ ತೀಕ್ಷ್ಣವಾಗಿರುತ್ತಿತ್ತು. ಅದು ಶಿಷ್ಯರ ಅಂತರಂಗವನ್ನು ತೂರಿಕೊಂಡು ಹೋಗಿ ಅಲ್ಲಿರುವ ಸಂಸ್ಕಾರಗಳ ಕ್ಯಾನ್ಸರ್ ಸೆಲ್‌ಗಳನ್ನೆಲ್ಲ ನಾಶಗೊಳಿಸಿ ಅವರನ್ನು ಭವರೋಗಮುಕ್ತರನ್ನಾಗಿ ಮಾಡುತ್ತಿತ್ತು. ಅದು ಶಿಷ್ಯರಿಗೇ ಅರಿವಿಲ್ಲದಂತೆಯೇ ನಡೆಯುತ್ತಿತ್ತು. ಅವರಲ್ಲಿ ಅಧ್ಯಾತ್ಮ, ಮಹಾಶಕ್ತಿಯಾಗಿ ಅಭಿವ್ಯಕ್ತವಾಯಿತು. ದೃಷ್ಟಿ ಅಥವಾ ಸ್ಪರ್ಶಮಾತ್ರದಿಂದ ಅವರು ವ್ಯಕ್ತಿಯ ಜೀವನದ ದಿಕ್ಕನ್ನೇ ಬದಲಾಯಿಸುತ್ತಿದ್ದರು.

ಅವರೇ ಕೊಟ್ಟಿರುವ ಇನ್ನೊಂದು ಉದಾಹರಣೆಯಂತೆ, ಅವರು ಒಂದು ಬೃಹತ್ ಅಯಸ್ಕಾಂತ ಪರ್ವತದಂತಿದ್ದರು. ಯಾವುದೇ ಹಡಗು ಅದರ ಸಮೀಪಕ್ಕೆ ಹೋದರೂ ಅದರ

> ಅದ್ಭುತ ವಿಶಾಲ ಅನಂತ ಹೃದಯ ಒಂದುಗೂಡಬೇಕಾಗಿತ್ತು. ಯಾರು ಪ್ರತಿಯೊಂದು ಸಂಪ್ರದಾಯದಲ್ಲಿಯೂ ಒಬ್ಬನೇ ಈಶ್ವರನು ಕಾರ್ಯವೆಸಗುತ್ತಿರುವುದನ್ನು ಕಾಣಬಲ್ಲರೋ, ಯಾರ ಹೃದಯ ದೀನರಿಗೆ, ದುರ್ಬಲರಿಗೆ, ಜಾತಿಬಾಹಿರರಿಗೆ, ಪದದಲಿತರಿಗೆ – ಅವರು ಭರತಖಂಡದಲ್ಲಿರಲಿ, ಪ್ರಪಂಚದಲ್ಲಿ ಬೇರೆಲ್ಲಿಯಾದರೂ ಇರಲಿ– ಮರುಗುತ್ತಿತ್ತೋ, ಜೊತೆಗೆ ಯಾರ ಅದ್ಭುತ ಪ್ರಚಂಡ ಬುದ್ಧಿಶಕ್ತಿಯು ಭರತಖಂಡದ ಮತ್ತು ಹೊರಗಿನ ವಿಭಿನ್ನ ಸಂಪ್ರದಾಯಗಳಲ್ಲಿ ಸಮನ್ವಯತೆಯನ್ನು ಸ್ಥಾಪಿಸುವ ಉದಾತ್ತ ವಿಚಾರವನ್ನು ಚಿಂತಿಸಿತೋ, ಯಾರು ಹೃದಯ ಮತ್ತು ಬುದ್ಧಿಗಳ ಸಾಮರಸ್ಯವನ್ನು ಸಾಧಿಸುವ ವಿಶ್ವಧರ್ಮವನ್ನು ಸ್ಥಾಪಿಸಬಲ್ಲವರಾಗಿದ್ದರೋ ಅಂತಹ ವ್ಯಕ್ತಿ ಜನ್ಮವೆತ್ತಿದನು. – ಸ್ವಾಮಿ ವಿವೇಕಾನಂದ

ಕಬ್ಬಿಣದ ಅಂಶಗಳನ್ನೆಲ್ಲ (ಬೋಲ್ಟು ನಟ್ಟು ಇತ್ಯಾದಿಗಳು) ಆ ಪರ್ವತವು ಸೆಳೆದುಕೊಂಡು ಆ ಹಡಗು ಸಮುದ್ರದಲ್ಲಿ ಮುಳುಗಿ ಹೋಗುತ್ತಿತ್ತು. ಶ್ರೀರಾಮಕೃಷ್ಣರೆಂಬ ಘಟಸರ್ಪದ ಬಾಯಿಗೆ ಬಿದ್ದ ಯಾವ ಕಪ್ಪೆಯೂ ಬದುಕುಳಿಯುತ್ತಿರಲಿಲ್ಲ. ಸುನಾಮಿಯು ಸಾವಿರಾರು ಮೈಲಿಯವರೆಗೂ ತನ್ನ ಶಕ್ತಿವಲಯವನ್ನು ವಿಸ್ತರಿಸುವಂತೆ ಶ್ರೀರಾಮಕೃಷ್ಣರು ಎಬ್ಬಿಸಿದ ಪ್ರಚಂಡ ಆಧ್ಯಾತ್ಮಿಕ ಪ್ರವಾಹವು ಇಂದಿಗೂ ಅನೇಕ ಜೀವಿಗಳನ್ನು ತನ್ನ ತೆಕ್ಕೆಗೆ ತಂದುಕೊಂಡಿದೆ, ಮುಂದೆಯೂ ಸಾವಿರಾರು ವರ್ಷಗಳವರೆಗೆ ಆ ಪ್ರವಾಹವು ಮುನ್ನುಗ್ಗುತ್ತಲೇ ಹೋಗುತ್ತದೆ.

ಹೀಗೆ ಎಲ್ಲ ರೀತಿಯಿಂದಲೂ ಆಧ್ಯಾತ್ಮಿಕ ಪರಿಪೂರ್ಣತೆಯನ್ನು ಶ್ರೀರಾಮಕೃಷ್ಣರು ಸಾಧಿಸಿದರು.

### ನೈತಿಕತೆ ಮತ್ತು ವ್ಯಾವಹಾರಿಕತೆಗಳ ಪರಿಪೂರ್ಣ ಪ್ರಕಾಶ

ಧರ್ಮದ ಇನ್ನೊಂದು ಮುಖವಾದ ನೈತಿಕತೆಯಲ್ಲಿಯೂ ಅವರು ಪರಿಪೂರ್ಣರಾಗಿದ್ದರು. ಅಪ್ಪಿತಪ್ಪಿಯೂ ಅವರ ಬಾಯಿಂದ ಅಸತ್ಯ ಹೊರಬೀಳುತ್ತಿರಲಿಲ್ಲ – ಅದು ಸಾಧ್ಯವೇ ಇರಲಿಲ್ಲ, ಏಕೆಂದರೆ ಅವರ ಒಳಗೆಲ್ಲ ಸತ್ಯವೇ ತುಂಬಿಕೊಂಡಿತ್ತು. ಸುಳ್ಳು ಹೇಳುವ ಭಯದಿಂದ ಕೆಲವರು ಮಿತಭಾಷಿಗಳಾಗಿರುತ್ತಾರಂತೆ. ಆದರೆ ಶ್ರೀರಾಮಕೃಷ್ಣರು ತುಂಬ ಮಾತನಾಡುತ್ತಿದ್ದರೂ ಸುಳ್ಳು ಹೇಳುವ ಭಯವಿರಲಿಲ್ಲ – ಚೆನ್ನಾಗಿ ಪಳಗಿಸಿದ ನರ್ತಕನು ತಪ್ಪು ಹೆಜ್ಜೆ ಹಾಕದೆ ಇರುವಂತೆ. ಅವರ ಜೀವನದಲ್ಲಿ ಬರುವ ಘಟನೆಗಳಿಂದ ಅವರು ಸತ್ಯವಚನ ಪರಿಪಾಲನೆಗೆ ಎಷ್ಟೊಂದು ಒತ್ತು ನೀಡುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಸತ್ಯಸಂಧತೆಯ ಒಂದು ಉದಾತ್ತ ಆಯಾಮವೆಂದರೆ ಮನಸ್ಸು, ಮಾತು, ಕೃತಿ ಒಂದಾಗಿರುವುದು, ಭಾವದ ಮನೆಯಲ್ಲಿ ಕಳ್ಳತನವಾಗದೇ ಇರುವುದು. ಈ ಗುಣ ಶ್ರೀರಾಮಕೃಷ್ಣರಲ್ಲಿ ಎದ್ದು ಕಾಣುತ್ತದೆ.

ಇತರರಿಗೆ ಸೇರಿದ ಯಾವುದೇ ಪದಾರ್ಥವನ್ನು ತೆಗೆದುಕೊಳ್ಳುವುದಾಗಲಿ, ಅದಕ್ಕೆ ಆಸೆಪಡುವುದಾಗಲಿ ಶ್ರೀರಾಮಕೃಷ್ಣರ ಪಾಲಿಗೆ ದೂರದ ಮಾತು. ಭಕ್ತ ಶಂಭುಮಲ್ಲಿಕನ ತೋಟದ ಮಾಲಿ ಕಿತ್ತು ಕೊಟ್ಟ ನಿಂಬೆಹಣ್ಣನ್ನು ತಂದುದೂ ಅವರ ಪಾಲಿಗೆ ಕಳ್ಳತನವಾಯಿತು! – ಯಜಮಾನನ ಅನುಮತಿ ಇಲ್ಲದೇ ತಂದುದರಿಂದ. ಅವರ ಜೀವನದಲ್ಲಿ ಬರುವ ಇಂತಹ ಅನೇಕ ಘಟನೆಗಳು, ಅವರು ಅಸ್ತೇಯವನ್ನು ಮನೋವಾಕ್ಕಾಯವಾಗಿ ಅನುಸರಿಸಿದರು ಎಂಬುದನ್ನು ಸೂಚಿಸುತ್ತವೆ. ಬ್ರಹ್ಮಚರ್ಯವಂತೂ ಅವರ ಜೀವನದ ಉಸಿರಾಗಿತ್ತು. ಅಚಾನಕವಾಗಿ ಮಾತಿನಿಂದ ಯಾರನ್ನಾದರೂ ನೋಯಿಸಿದರೂ ಅವರಿಗೆ ಅದನ್ನು ಸಹಿಸಲು ಆಗುತ್ತಿರಲಿಲ್ಲ. ತಮಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಸ್ವೀಕರಿಸುತ್ತಿದ್ದರು. ನಾಳೆಗಾಗಿ ಏನನ್ನಾದರೂ ಸಂಗ್ರಹಿಸಿಟ್ಟುಕೊಳ್ಳುವುದೆಂದರೆ ಅವರಿಗಾಗುತ್ತಿರಲಿಲ್ಲ. ಊಟದ ನಂತರ ತಿನ್ನುವ ಮಸಾಲೆ ಪದಾರ್ಥವನ್ನು ನಾಳೆಗಾಗಿ ಸ್ವಲ್ಪ ಇರಲಿ ಎಂದು ತೆಗೆದುಕೊಂಡು ಹೋಗುತ್ತಿರುವಾಗ ಅವರ ಕೊಠಡಿಗೆ ದಾರಿಯೇ ತೋಚದಾಯಿತು.

ದಿನನಿತ್ಯದ ಕೆಲಸಕಾರ್ಯಗಳಲ್ಲಿಯೂ ಶ್ರೀರಾಮಕೃಷ್ಣರು ಪರಿಪೂರ್ಣರಾಗಿದ್ದರು. ಎಲ್ಲ ವಸ್ತುಗಳನ್ನೂ ನಿರ್ದಿಷ್ಟ ಸ್ಥಳದಲ್ಲಿಯೇ ಇರಿಸುತ್ತಿದ್ದರು. ಕತ್ತಲೆಯಲ್ಲಿಯೂ ಅದು ಕೈಗೆ ಸಿಗುವಂತಿರಬೇಕು. ಯಾವುದನ್ನೂ ಅವರು ಮರೆಯುತ್ತಿರಲಿಲ್ಲ. ಆಗಾಗ ಸಮಾಧಿಗೆ ಹೋಗುತ್ತ ಮೈಮರೆಯುವ ಸ್ಥಿತಿ ಅವರದಾದರೂ, ಎಲ್ಲಿಗಾದರೂ ಹೋದಾಗ ತೆಗೆದುಕೊಂಡು ಹೋದ ಪದಾರ್ಥಗಳನ್ನು ಹಿಂತಿರುಗಿ ತೆಗೆದುಕೊಂಡು ಬರಲು ಎಂದೂ ಮರೆಯುತ್ತಿರಲಿಲ್ಲ. ಎಲ್ಲವನ್ನೂ ಓರಣವಾಗಿಯೂ ಚೊಕ್ಕಟವಾಗಿಯೂ ಜೋಡಿಸಿಡುವುದು ಅವರ ವಾಡಿಕೆ. ದುಂದುವೆಚ್ಚ ಅವರಿಗಾಗದು. ಬೆಂಕಿ ಒಳಗಡೆ ಇರುವಾಗ ಅದರ ಮೂಲಕವೇ ದೀಪ ಹಚ್ಚಬೇಕು. ಅದಕ್ಕಾಗಿ ಒಂದು ಬೆಂಕಿ ಕಡ್ಡಿಯನ್ನೂ ವ್ಯರ್ಥಗೊಳಿಸಬಾರದು. ಸಣ್ಣ ಕೆಲಸವನ್ನಾದರೂ ಅತ್ಯಂತ ಅಚ್ಚುಕಟ್ಟಾಗಿಯೇ ಮಾಡಬೇಕು. ಅಡಿಗೆ ಮಾಡುವಾಗ ಯಾವುದಾದರೂ ಮಸಾಲೆ ಇಲ್ಲದಿದ್ದರೆ, ಅದು ಇಲ್ಲದಿದ್ದರೂ ಪರವಾಗಿಲ್ಲ ಎಂದು ಕಡೆಗಣಿಸುವಂತಿಲ್ಲ. ಹೀಗೆ ವ್ಯಾವಹಾರಿಕ ವಿಷಯಗಳಲ್ಲಿಯೂ ಶ್ರೀರಾಮಕೃಷ್ಣರು ತುಂಬ ಪರಿಪೂರ್ಣರಾಗಿದ್ದರು. ಮಾತಿನಲ್ಲಿಯೂ ಅವರನ್ನು ಯಾರೂ ಮೀರಿಸುವಂತಿರಲಿಲ್ಲ.

### ಮಾನವೀಯತೆಯ ಪರಿಪೂರ್ಣ ಪ್ರಕಾಶ

ಧರ್ಮದ ಇನ್ನೊಂದು ಮುಖ ಮಾನವೀಯತೆ. ಶ್ರೀರಾಮಕೃಷ್ಣರು ಇದರಲ್ಲಿಯೂ ಪರಿಪೂರ್ಣರಾಗಿದ್ದರು. ಯಾತ್ರೆಗೆ ಹೋಗಿದ್ದಾಗ ದೇವಘರದ ಬಳಿ ಕ್ಷಾಮಪೀಡಿತ ಜನರನ್ನು ನೋಡಿ, ಮಥುರನಾಥನು ಅವರಿಗೆ ಊಟ, ಬಟ್ಟೆ ಮುಂತಾದ ಆವಶ್ಯಕತೆಗಳನ್ನು ಒದಗಿಸಿದ ಹೊರತು ತಾವು ಯಾತ್ರೆ ಮುಂದುವರಿಸುವುದಿಲ್ಲ ಎಂದು ಅವರೊಡನೇ ಹೋಗಿ ಕುಳಿತುಬಿಡುತ್ತಾರೆ.

ಅವರ ಜೀವಕಾರುಣ್ಯವೇ ಸ್ವಾಮಿ ವಿವೇಕಾನಂದರನ್ನು ಸಮಾಜ ಸೇವಕರನ್ನಾಗಿ ಪರಿವರ್ತಿಸಿತು, ಶ್ರೀಮಾತೆ ಶಾರದಾದೇವಿಯವರು ಲೋಕಕಲ್ಯಾಣಾರ್ಥವಾಗಿಯೇ ತಮ್ಮ ದೇಹವನ್ನು ಉಳಿಸಿಕೊಳ್ಳುವಂತೆ ಮಾಡಿತು ಮತ್ತು ರಾಮಕೃಷ್ಣ ಮಹಾಸಂಘದ ಹಾಗೂ ಸಾವಿರಾರು ಸೇವಾಕೇಂದ್ರಗಳ ಉದಯಕ್ಕೆ ಕಾರಣವಾಯಿತು.

ಅವರ ಪ್ರಿಯ ಶಿಷ್ಯನಾದ ಲಾಟುವಿಗೆ (ಮುಂದೆ ಸ್ವಾಮಿ ಅದ್ಭುತಾನಂದರು) ಭಕ್ತರೊಬ್ಬರು ಒಂದು ಜೊತೆ ಹೊಸ ಚಪ್ಪಲಿಯನ್ನು ತಂದು ಕೊಟ್ಟಿದ್ದರು. ಶ್ರೀರಾಮಕೃಷ್ಣರು ಮಧ್ಯರಾತ್ರಿ ಎದ್ದು ಪಂಚವಟಿಯ ಕಡೆ ಹೋಗುತ್ತಿರುವಾಗ ಲಾಟುವಿನ ಒಂದು ಚಪ್ಪಲಿ ಮಾತ್ರ ಅಲ್ಲಿರುವುದು ಅವರ ಗಮನಕ್ಕೆ ಬಂತು. ಇನ್ನೊಂದು ಚಪ್ಪಲಿಯನ್ನು ಬಹುಶಃ ನಾಯಿ ಎತ್ತಿಕೊಂಡು ಹೋಗಿತ್ತು. ಹುಡುಗನು ಬೆಳಗ್ಗೆ ಎದ್ದಾಗ ಒಂದೇ ಚಪ್ಪಲಿ ಇರುವುದನ್ನು ನೋಡಿ ಎಷ್ಟೊಂದು ಪರಿತಪಿಸಬಹುದು ಎಂಬುದನ್ನು ಭಾವಿಸಿ, ಶ್ರೀರಾಮಕೃಷ್ಣರು ಒಂದು ದೀಪವನ್ನು ಹಿಡಿದುಕೊಂಡು ತೋಟದಲ್ಲೆಲ್ಲ ಹುಡುಕಿ, ಕಳೆದುಹೋದ ಚಪ್ಪಲಿಯನ್ನು ತೆಗೆದುಕೊಂಡು ಬಂದು ಇನ್ನೊಂದು ಚಪ್ಪಲಿಯ ಜೊತೆ ಇರಿಸಿದರು.

ಶ್ರೀರಾಮಕೃಷ್ಣರ ಜೀವಕಾರುಣ್ಯ ಎಷ್ಟು ತೀವ್ರವಾಗಿತ್ತೆಂದರೆ, ಅವರೇ ತಮ್ಮ ಶಿಷ್ಯರ ಪಾಪಗಳನ್ನು ಕೂಡ ಸ್ವೀಕರಿಸಿ, ಅದರ ಪರಿಣಾಮವಾಗಿ ಅಸಾಧ್ಯ ದೈಹಿಕ ವೇದನೆಗಳನ್ನು ಅನುಭವಿಸಿ, ಅವರನ್ನು ಉದ್ಧಾರ ಮಾಡಿದರು. ಅವರ ಶಿಷ್ಯರಲ್ಲಿ ಗಿರೀಶಚಂದ್ರ ಘೋಷ್ ಅಪೂರ್ವ ವ್ಯಕ್ತಿ. ಆತ ಮಹಾ ಮೇಧಾವಿ, ಅದ್ಭುತ ಪ್ರತಿಭಾನ್ವಿತ ಮತ್ತು ಅದಮ್ಯ ಶ್ರದ್ಧೆಯಿಂದ ಕೂಡಿದವನು. ಹಾಗೆಯೇ ಅವನು ಅತೀವ ವಿಷಯಲಂಪಟನೂ ಕುಡುಕನೂ ಆಗಿದ್ದ. ಅಂಥವನನ್ನು ಶ್ರೀರಾಮಕೃಷ್ಣರು ಸಂತಪುರುಷನನ್ನಾಗಿ ಪರಿವರ್ತಿಸಿದರು. ಅವನು ದಕ್ಷಿಣೇಶ್ವರಕ್ಕೆ ಶ್ರೀರಾಮಕೃಷ್ಣರನ್ನು ನೋಡಲು ಬಂದಾಗ ಅವನನ್ನು ಗಂಗಾಸ್ನಾನ ಮಾಡಿಕೊಂಡು ಬರಲು ಹೇಳಿದರಂತೆ. "ನಾನು ಮಾಡಿದ ಪಾಪವನ್ನು ಗಂಗೆ ತೊಳೆಯಲಾರಳು" ಎಂದು ಗಿರೀಶ ನಿರಾಕರಿಸಿದ. ಗಂಗೆ ಕೋಟಿ ಕೋಟಿ ಪಾಪಗಳನ್ನೂ ತೊಳೆಯಬಲ್ಲಳು ಎಂದು ಎಷ್ಟೇ ಒತ್ತಾಯ ಮಾಡಿ ಹೇಳಿದರೂ ಅವನು ಗಂಗಾಸ್ನಾನ ಮಾಡಲು ಒಪ್ಪಲಿಲ್ಲ. ಅನೇಕ ವರ್ಷಗಳ ನಂತರ ಅವನು ಬಾಗಬಜಾರಿನಲ್ಲಿರುವ ತನ್ನ ಮನೆಯಿಂದ ಪ್ರತಿದಿನ ಗಂಗಾಸ್ನಾನಕ್ಕೆ ಹೋಗುತ್ತಿದ್ದುದನ್ನು ಎಲ್ಲರೂ ಗಮನಿಸಿದರು. ಮೊದಲಿನಿಂದಲೂ ಪರಿಚಯವಿದ್ದ ಭಕ್ತರೊಬ್ಬರಿಗೆ ಗಿರೀಶನು ಈ ರೀತಿ ಗಂಗಾಸ್ನಾನಕ್ಕೆ ಹೋಗುತ್ತಿರುವುದನ್ನು ನೋಡಿ ತುಂಬ ಆಶ್ಚರ್ಯವಾಯಿತು. ಒಂದು ದಿನ ಅವನನ್ನು ಸಂಧಿಸಿ ವಿಚಾರಿಸುತ್ತಾರೆ: "ಗಿರೀಶ್, ಶ್ರೀರಾಮಕೃಷ್ಣರು ಗಂಗಾಸ್ನಾನ ಮಾಡು ಎಂದು ಎಷ್ಟೇ ಒತ್ತಾಯಿಸಿದರೂ ನೀವು ಮಾಡುತ್ತಿರಲಿಲ್ಲ, ಆದರೆ ಈಗ ಪ್ರತಿದಿನ ಗಂಗಾಸ್ನಾನ ಮಾಡುತ್ತಿದ್ದೀರಲ್ಲ, ಕಾರಣವೇನು?" ಗಿರೀಶನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ತೀಕ್ಷ್ಣವಾಗಿ ಉತ್ತರಿಸಿದನು: "ನಾನು ಏಕೆ ಗಂಗಾಸ್ನಾನ ಮಾಡುತ್ತಿದ್ದೇನೆ ಗೊತ್ತೆ! ನಾನು ಗಂಗೆಗೆ ಹೇಳುತ್ತೇನೆ, 'ಅಮ್ಮ, ನನ್ನ ಪಾಪವನ್ನು ತೊಳೆದುಕೊಳ್ಳಲು ನಿನ್ನಲ್ಲಿಗೆ ಬರುತ್ತಿಲ್ಲ. ಶ್ರೀರಾಮಕೃಷ್ಣರು ನನ್ನ ಪಾಪಗಳನ್ನೆಲ್ಲ ತೊಳೆದುಬಿಟ್ಟಿದ್ದಾರೆ. ಈಗ ನನ್ನಲ್ಲಿ ಶ್ರೀರಾಮಕೃಷ್ಣರೇ ತುಂಬಿಕೊಂಡಿದ್ದಾರೆ. ಈಗ ನಾನು ಇಲ್ಲಿ ಸ್ನಾನ ಮಾಡುವುದರಿಂದ ನೀನು ಪವಿತ್ರವಾಗಲೆಂದು ಸ್ನಾನಕ್ಕೆ ಬರುತ್ತಿದ್ದೇನೆ.'" ಈ ಉತ್ತರವನ್ನು ಕೇಳಿ ಆ ಭಕ್ತರು ಬೆರಗಾದರು.

> **ನಾನು ನಿಮ್ಮನ್ನು ಪ್ರೀತಿಸುವೆ ಎನ್ನುವಿರೇನು? ಇಲ್ಲ, ನಿಜಕ್ಕೂ ನನ್ನಲ್ಲಿ ಆ ಪ್ರೀತಿ ಎಂಬುದು ಇದ್ದಿದ್ದರೆ, ಅದು ನಮ್ಮೆಲ್ಲರನ್ನೂ ಸದಾಕಾಲ ಪರಸ್ಪರ ಗಾಢವಾಗಿ ಬಂಧಿಸಿಬಿಡುತ್ತಿತ್ತು. ಆಹಾ! ಶ್ರೀರಾಮಕೃಷ್ಣರು ನಮ್ಮನ್ನು ಎಷ್ಟು ಗಾಢವಾಗಿ ಪ್ರೀತಿಸಿದರು. ಅದರಲ್ಲಿನ ಒಂದು ಅಂಶವನ್ನು ಕೊಡುವ ಶಕ್ತಿಯೂ ನಮ್ಮಲ್ಲಿಲ್ಲ.** –ಸ್ವಾಮಿ ಪ್ರೇಮಾನಂದ (ಭಕ್ತರನ್ನು ಕುರಿತು)

ಧರ್ಮಸಮಗ್ರದ ಮೂರ್ತರೂಪ

ಶ್ರೀರಾಮಕೃಷ್ಣರು ಧರ್ಮದ ಮೂರು ಮುಖ್ಯಾಂಶಗಳಾದ **ಆಧ್ಯಾತ್ಮಿಕತೆ, ನೈತಿಕತೆ ಮತ್ತು ಮಾನವೀಯತೆಗಳಲ್ಲಿ** ಪರಿಪೂರ್ಣರಾಗಿದ್ದುದು ಮಾತ್ರವಲ್ಲದೆ ಧರ್ಮದ ಹೊರ ಆವರಣಕ್ಕೆ ಸಂಬಂಧಿಸಿದ ವಿವಿಧ ಆಚರಣೆಗಳನ್ನೂ, ಕ್ರಿಯಾವಿಧಿಗಳನ್ನೂ ಸಂಪ್ರದಾಯಗಳನ್ನೂ ನಿಷ್ಠೆಯಿಂದ ಅನುಸರಿಸುತ್ತಿದ್ದರು – ಕೆಲವು ಮೂಢ ನಂಬಿಕೆಗಳನ್ನೂ ಕೂಡ. ಅವರ ಸಮಗ್ರ ದೃಷ್ಟಿಗೆ ಯಾವುದೂ ಕ್ಷುಲ್ಲಕವಾಗಿ ಕಾಣುತ್ತಿರಲಿಲ್ಲ, ಅವರ ಅನಂತ ಸಹಾನುಭೂತಿಗೆ ಯಾವುದೂ ಅಸಹ್ಯವೆನಿಸಲಿಲ್ಲ. ಧರ್ಮದ ಎಲ್ಲ ಅಂಶಗಳನ್ನೂ ಸ್ವೀಕರಿಸಿದರು ಹಾಗೂ ಎಲ್ಲ ಧರ್ಮಗಳನ್ನೂ ಸ್ವೀಕರಿಸಿದರು. ಅವರು ಧರ್ಮಸಮಗ್ರದ ಮೂರ್ತರೂಪವಾಗಿದ್ದರು, ಇಡೀ ಧರ್ಮದ ಪರಿಪೂರ್ಣರೂಪವಾಗಿದ್ದರು.

ಧರ್ಮವನ್ನು ಒಂದು ಹಣ್ಣಿಗೆ ಹೋಲಿಸಿದರೆ, ಮೇಲೆ ಪ್ರಸ್ತಾಪಿಸಿದ ಮೂರು ಅಂಶಗಳನ್ನು ಅದರ ತಿರುಳು ಎಂದು ಹೇಳಬಹುದು, ಬಾಹ್ಯಾಚರಣೆಗಳು ಅದರ ಸಿಪ್ಪೆ ಎನ್ನಬಹುದು. ಶ್ರೀರಾಮಕೃಷ್ಣರೇ ಹೇಳುವಂತೆ, ನಾವು ಹಣ್ಣನ್ನು ತೂಕಮಾಡುವಾಗ ಸಿಪ್ಪೆಯನ್ನು ಸೇರಿಸಿ ಇಡೀ ಹಣ್ಣನ್ನು ತೆಗೆದುಕೊಳ್ಳುತ್ತೇವೆ, ಕೇವಲ ತಿರುಳನ್ನು ಮಾತ್ರವಲ್ಲ. ಶ್ರೀರಾಮಕೃಷ್ಣರು ಚೆನ್ನಾಗಿ ಮಾಗಿದ ಧರ್ಮಫಲವಾಗಿದ್ದರು. ಬೇರೆ ಹಣ್ಣುಗಳು ಕೊಳೆತು ಹೋಗಬಹುದು. ಆದರೆ ಈ ಹಣ್ಣು ಸ್ವಲ್ಪವೂ ಹುಳಿಯಿಲ್ಲದ, ಯಾವಾಗಲೂ ಸಿಹಿಯಾಗಿಯೇ ಇರುವ, ಎಂದೆಂದಿಗೂ ಕೊಳೆಯದ, ಸನಾತನ, ನಿತ್ಯನೂತನ ಫಲ. ಶ್ರೀರಾಮಕೃಷ್ಣರೆಂಬ ಕಲ್ಪತರುವಿನ ಕೆಳಗೆ ಕುಳಿತುಕೊಂಡಿದ್ದರೆ ಯಾವಾಗಲೂ ಈ ಫಲವನ್ನು ಅನುಭವಿಸುತ್ತಿರಬಹುದು.